**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿ.ಸಂಖ್ಯೆಃ 342ಃ2016**

**ಪಿರ್ಯಾದಿ** ಃ ಬದನವಾಳು ಪೋಲೀಸರು

**ವಿರುದ್ಧ**

**ಆರೋಪಿತರು ಃ**

1. ಮಾದೇಶ ಬಿನ್ ಲೇ.ಚಿಕ್ಕಬಸವಯ್ಯ,
   35 ವರ್ಷ,

2. ಮಂಗಳಮ್ಮ ಬಿನ್ ಚಿಕ್ಕಬಸವಯ್ಯ,
   37 ವರ್ಷ
   ಇಬ್ಬರ ವಾಸ ಬಿಳುಗಲಿ ಗ್ರಾಮ,
   ನಂಜನಗೂಡು ತಾಃ

**ದೋಷಾರೋಪಣೆ**

**ಶ್ರೀನಾಥ್.ಎ, 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶನಾದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ-**

ದಿಃ 18.07.2015 ರಂದು ಸಂಜೆ 07-00 ಗಂಟೆ ಸಮಯದಲ್ಲಿ ಬದನವಾಳು ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿದ ಬಿಳುಗಲಿ ಗ್ರಾಮದ ಸಾಕ್ಷಿ-8 ಚಿಕ್ಕಮಾದಮ್ಮ ರವರ ವಾಸದ ಮನೆಯಲ್ಲಿ ಸಾಕ್ಷಿ-1 ಅನಿತಾರವರು ಇದ್ದಾಗ ಆರೋಪಿತರಾದ ನೀವು ಸಮಾನ ಉದ್ದೇಶಹೊಂದಿ ದಿಃ14-7-2015 ರಂದು ನಡೆದಿದ್ದ ಗಲಾಟೆಯ ದ್ವೇಷದಿಂದ 1 ನೇ ಆರೋಪಿತರಾದ ನೀವು ಸಾಕ್ಷಿ-1 ರವರ ಮನೆಗೆ ಅಕ್ರಮ ಪ್ರವೇಶಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 448 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶಹೊಂದಿ 1 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಏನೇ ಸೂಳೆಮುಂಡೆ ನಿನ್ನ ಗಂಡ ಎಲ್ಲಿ ಅವನನ್ನು ಈಗಲೆ ಮುಗಿಸಿಬಿಡುತ್ತೇನೆಂದು, 2 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನಮಾಡಿ ಶಾಂತಿಯನ್ನು ಭಂಗಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶಹೊಂದಿ 1 ನೇ ಆರೋಪಿತರಾದ ನೀವು ಸಾಕ್ಷಿ-1 ರವರ ಕೈಯನ್ನು ಹಿಡಿದು ಎಳೆದಾಡಿ, ಧರಿಸಿದ್ದ ನೈಟಿಯನ್ನು ಹರಿದುಹಾಕಿ ಅವಮಾನಮಾಡಿ ಮಾನಭಂಗಮಾಡಲು ಪ್ರಯತ್ನಿಸಿದ

ಕಾರಣ ಭಾರತ ದಂಡ ಸಂಹಿತೆಯ ಕಲಂ 354 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶಹೊಂದಿ 1 ನೇ ಆರೋಪಿತರಾದ ನೀವು ಕೈಯಿಂದ ಸಾಕ್ಷಿ-01 ರವರ ಕತ್ತಿಗೆ, ಮಂಡಿಗೆ, ಮೈ ಮೇಲೆ ಹೊಡೆದು ಸ್ವಯಂ ಪ್ರೇರಿತವಾಗಿ ಸಾಕ್ಷಿ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟುಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 323 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶಹೊಂದಿ 1 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಈ ದಿನ ಬದುಕಿಕೊಂಡೆ ಮುಂದೊಂದು ದಿನ ಮುಗಿಸದೆ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 506 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

**ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.**

ಸಹಿ/-

**ದಿನಾಂಕಃ 04-10-2019** **1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.**
**ಸ್ಥಳ ಃ ನಂಜನಗೂಡು** **ನಂಜನಗೂಡು**